**File No.ITBT/197/STS/2020-SO ST-ITBT SEC**

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** 2019-20ನೇ ಸಾಲಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ವಿವಿಧ ಯೋಜನಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡಿರುವ ಅನುದಾನದ ವಿತರಣೆ ಬಗ್ಗೆ.

ಓದಲಾಗಿದೆ :-

1. ಸರ್ಕಾರದ ಆದೇಶ ಸಂಖ್ಯೆ: ವಿಯಇ 73 ವಿತ್ರಮ 2019, ದಿನಾಂಕ: 10.04.2019.
2. ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ಪ್ರಸ್ತಾವನೆ ಸಂಖ್ಯೆ: ವಿತಂದಾಸ/2019-20/ 2020-21/144, ದಿನಾಂಕ:25.09.2020.
3. ಸರ್ಕಾರದ ಆದೇಶ ಸಂಖ್ಯೆ: ವಿಯಇ 103 ವಿತ್ರಮ 2019, ದಿನಾಂಕ: 20.05.2019, 28.08.2019.
4. ಸರ್ಕಾರದ ಆದೇಶ ಸಂಖ್ಯೆ: ಐಟಿಬಿಟಿ 102 ಎಸ್‌ಟಿಎಸ್ 2019 ದಿನಾಂಕ:28.11.2019.
5. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2020, ದಿನಾಂಕ:13.01.2020.

* * * *

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1)ರ ಸರ್ಕಾರಿ ಆದೇಶದಲ್ಲಿ ವಿದ್ಯುನ್ಮಾನ. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ, ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ಚಾಲ್ತಿಯಲ್ಲಿರುವ ವಿವಿಧ ಯೋಜನೆಗಳನ್ನು ಮುಂದುವರಿಸಿ, 2019-20ನೇ ಸಾಲಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ ಯೋಜನೆಯ ಲೆಕ್ಕಶೀರ್ಷಿಕೆ 3425-60-600-0-02(059) (ಯೋಜನೆ)ರಡಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಒಟ್ಟು ರೂ.1350.00 ಲಕ್ಷಗಳ ವಾರ್ಷಿಕ ಅನುದಾನವನ್ನು ಒದಗಿಸಲಾಗಿದ್ದು, ಮೇಲೆ ಓದಲಾದ ಕ್ರಮಾಂಕ (5)ರಲ್ಲಿ ಆರ್ಥಿಕ ಇಲಾಖೆಯು ಸದರಿ ಲೆಕ್ಕಶೀರ್ಷಿಕೆಯಡಿ ರೂ.337.50 ಲಕ್ಷಗಳನ್ನು ಕಡಿತಗೊಳಿಸಿರುತ್ತದೆ. ಕ್ರಮಾಂಕ (3) ಮತ್ತು (4)ರ ಸರ್ಕಾರಿ ಆದೇಶಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್, ಬೆಂಗಳೂರು, ಇವರಿಗೆ ಒಟ್ಟು ರೂ.1012.50 ಲಕ್ಷಗಳನ್ನು ಮೂರು ಕಂತುಗಳಲ್ಲಿ ಬಿಡುಗಡೆ ಮಾಡಲಾಗಿದೆ.

2019-20ನೇ ಸಾಲಿನ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ವಿವಿಧ ಯೋಜನೆಗಳಾದ, CESEM, CISEE, KFIST-L1, KFIST-L2, ARP, RGS/F ಮತ್ತು FDP ಕಾರ್ಯಕ್ರಮಗಳಿಗೆ ಸರ್ಕಾರದ ಅನುದಾನ ನೀಡುವ ಸಲುವಾಗಿ ಕರ್ನಾಟಕ ರಾಜ್ಯದ ಸಂಶೋಧನಾ ಸಂಸ್ಥೆಗಳು ಮತ್ತು ವೈದ್ಯಕೀಯ ವಿಷಯಕ್ಕೆ ಸಂಬಂಧಪಟ್ಟ ಶೈಕ್ಷಣಿಕ ಸಂಸ್ಥೆಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿತ್ತು. ರಾಜ್ಯದ ವಿವಿಧ ಶಿಕ್ಷಣ ಸಂಸ್ಥೆಗಳಿಂದ 1994 ಅರ್ಜಿಗಳು ಸಲ್ಲಿಕೆಯಾಗಿರುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ಎಲ್ಲಾ ಯೋಜನೆಗಳಡಿ ಸಲ್ಲಿಕೆಯಾದ ಅರ್ಜಿಗಳನ್ನು ಪ್ರೊ:ರೊದ್ದಂ ನರಸಿಂಹ ಮತ್ತು ಪ್ರೊ:ಎಂ.ಆರ್.ಎಸ್.ರಾವ್ ರವರ ನೇತೃತ್ವದ ಎರಡು ಉಪ-ಸಮಿತಿಯು ಪರಿಶೀಲನೆ ನಡೆಸಿ, ಗುಣಮಟ್ಟ ಆಧಾರಿತ ಅಂಕಪಟ್ಟಿ(Credit Based Score), ಯೋಜನಾ ಸಂಯೋಜಕರ ಪ್ರಸ್ತುತಿ ಹಾಗೂ ಯೋಜನೆಯ ಪ್ರಾಮುಖ್ಯತೆಯ ಆಧಾರದ ಮೇಲೆ ಅರ್ಹ ಪ್ರಸ್ತಾವನೆಗಳನ್ನು ಆಯ್ಕೆ ಮಾಡಿರುತ್ತವೆ. ಎರಡು ಉಪ ಸಮಿತಿಗಳು ಶಿಫಾರಸ್ಸು ಮಾಡಿರುವ ವಿವಿಧ ಉಪಯೋಜನೆಗಳಡಿಯ ಫಲಾನುಭವಿಗಳ ಪಟ್ಟಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ಅಧ್ಯಕ್ಷರಾದ ಭಾರತ ರತ್ನ ಪ್ರೊ: ಸಿ.ಎನ್.ಆರ್.ರಾವ್ ರವರು ಅನುಮೋದನೆ ನೀಡಿದ್ದು, ಸರ್ಕಾರದಿಂದ ಅನುದಾನ ಬಿಡುಗಡೆಗೆ ಶಿಫಾರಸ್ಸು ಮಾಡಿರುತ್ತಾರೆ.

2019-20ನೇ ಸಾಲಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ಯೋಜನೆಗಳಡಿ ಆಯ್ಕೆ ಸಮಿತಿಯಿಂದ ಶಿಫಾರಸ್ಸುಗೊಂಡಿರುವ ಪ್ರಸ್ತಾವನೆಗಳ ಸಂಖ್ಯೆ ಹಾಗೂ ಅಗತ್ಯವಿರುವ ಹಣದ ವಿವರಗಳು ಈ ಕೆಳಗಿನಂತಿದೆ:

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಯೋಜನೆಗಳ ವಿವರ | ಆಯ್ಕೆ ಸಮಿತಿ ಶಿಫಾರಸ್ಸು ಮಾಡಿರುವ ಪ್ರಸ್ತಾವನೆಗಳ ಸಂಖ್ಯೆ | ಯೋಜನೆಯ ಅವಧಿ (ವರ್ಷಗಳು) | ಪ್ರತಿ ಯೋಜನೆಗೆ ಹಂಚಿಕೆಯಾದ ಮೊತ್ತ | ಮೊದಲನೆ ವರ್ಷಕ್ಕೆ ಅಗತ್ಯವಿರುವ ಹಣ | ಎರಡನೆ ವರ್ಷಕ್ಕೆ ಅಗತ್ಯವಿರುವ ಹಣ |
|---|---|---|---|---|---|---|
| 1 | CESEM | 02 | 2 | 50.00 | 50.00 | 50.00 |
| 2 | CISEE | 06 | 2 | 25.00 | 75.00 | 75.00 |
| 3 | KFIST-L1 | 20 | 2 | 15.00 | 150.00 | 150.00 |
| 4 | KFIST-L2 | 07 | 2 | 30.00 | 105.00 | 105.00 |
| 5 | RGS/F | 38 | 1 | 3.00 | 114.00 | 0 |
| 6 | ARP | 20 | 1 | 0.25 | 5.00 | 0 |
| 7 | FDP | 09 | 1 | 2.00 | 18.00 | 0 |
| | ಒಟ್ಟು | **102** | | **125.25** | **517.00** | **380.00** |

ಮೇಲೆ ಓದಲಾದ ಕ್ರಮಾಂಕ (2)ರಲ್ಲಿ ಭಾರತರತ್ನ ಪ್ರೊ:ಸಿ.ಎನ್.ಆರ್.ರಾವ್ ರವರ ನೇತೃತ್ವದ ಆಯ್ಕೆ ಸಮಿತಿಯು ಶಿಫಾರಸ್ಸು ಮಾಡಿರುವ ಫಲಾನುಭವಿಗಳ ಪಟ್ಟಿಗೆ ಅನುಮೋದನೆ ಕೋರಿ ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್ ರವರು ಪ್ರಸ್ತಾವನೆ ಸಲ್ಲಿಸಿದ್ದಾರೆ. ಹಾಗೆಯೆ 2019-20ನೇ ಸಾಲಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ವಿವಿಧ ಯೋಜನಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡಿರುವ ಅನುದಾನದಲ್ಲಿ ಆಯ್ಕೆ ಸಮಿತಿ ಶಿಫಾರಸ್ಸು ಮಾಡಿರುವ ಫಲಾನುಭವಿಗಳಿಗೆ ಆರ್ಥಿಕ ವರ್ಷ 2020-21ರಲ್ಲಿ ಬಿಡುಗಡೆ ಮಾಡಬೇಕಾಗಿರುವ ರೂ.517.00 ಲಕ್ಷಗಳ ಅನುದಾನವನ್ನು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿಯಲ್ಲಿ ಲಭ್ಯವಿರುವ ಅನುದಾನದಿಂದ ಬಿಡುಗಡೆ ಮಾಡುವುದಾಗಿ ಹಾಗೂ 2021-22ನೇ ಸಾಲಿನಲ್ಲಿ ಉಳಿದ ರೂ.380.00 ಲಕ್ಷಗಳನ್ನು ಸಂಬಂಧಪಟ್ಟ ಯೋಜನೆಗಳಿಗೆ ನಿಯಮಾನುಸಾರ ಪ್ರಗತಿ ಆಧಾರದಲ್ಲಿ ಬಿಡುಗಡೆ ಮಾಡಲಾಗುವುದೆಂದು ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್ ರವರು ತಮ್ಮ ಪ್ರಸ್ತಾವನೆಯಲ್ಲಿ ತಿಳಿಸಿದ್ದಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶದ ಸಂಖ್ಯೆ: ಐಟಿಬಿಟಿ 197 ಎಸ್‌ಟಿಎಸ್ 2020, ಬೆಂಗಳೂರು, ದಿನಾಂಕ:3.10.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಭಾರತ ರತ್ನ ಪ್ರೊ:ಸಿ.ಎನ್.ಆರ್.ರಾವ್ ರವರ ನೇತೃತ್ವದ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದಿಂದ ಶಿಫಾರಸ್ಸು ಮಾಡಿರುವ ಈ ಆದೇಶದೊಂದಿಗೆ ಲಗತ್ತಿಸಲಾಗಿರುವ ಅನುಬಂಧ 1ರ CESEM 2 ಪ್ರಸ್ತಾವನೆಗಳು; ಅನುಬಂಧ 2ರ CISEE 6 ಪ್ರಸ್ತಾವನೆಗಳು; ಅನುಬಂಧ 3ರ K-FIST-L1 20 ಪ್ರಸ್ತಾವನೆಗಳು; ಅನುಬಂಧ 4ರ K-FIST-L2 7 ಪ್ರಸ್ತಾವನೆಗಳು; ಅನುಬಂಧ 5ರ RGS/F 38 ಪ್ರಸ್ತಾವನೆಗಳು; ಅನುಬಂಧ 6ರ ARPಯ 20 ಪ್ರಸ್ತಾವನೆಗಳು; ಅನುಬಂಧ 7ರ FDP-Engg 9 ಪ್ರಸ್ತಾವನೆಗಳ ಫಲಾನುಭವಿ ಸಂಸ್ಥೆಗಳು/ಫಲಾನುಭವಿಗಳ ಪಟ್ಟಿಗೆ ಅನುಮೋದನೆ ನೀಡಲಾಗಿದೆ.

2019-20ನೇ ಸಾಲಿನ ಮುಂದುವರೆದ ಯೋಜನಾ ಕಾಯಕ್ರಮಗಳ ಅನುಷ್ಠಾನಕ್ಕಾಗಿ ಲೆಕ್ಕಶೀರ್ಷಿಕೆ 3425-60-600-0-02 (059)ರಡಿ ಬಿಡುಗಡೆಯಾಗಿರುವ ರೂ.1012.50 ಲಕ್ಷಗಳಲ್ಲಿ, ರೂ.897.00 ಲಕ್ಷಗಳನ್ನು (ಎಂಟುನೂರ ತೊಂಭತ್ತೇಳು ಲಕ್ಷಗಳು ಮಾತ್ರ) ಆಯ್ಕೆ ಸಮಿತಿಯು ಶಿಫಾರಸ್ಸು ಮಾಡಿರುವ ಎಲ್ಲಾ ಫಲಾನುಭವಿಗಳಿಗೆ ಆರ್ಥಿಕ ವರ್ಷ 2020-21ನೇ ಸಾಲಿನಲ್ಲಿ ರೂ.517.00 ಲಕ್ಷಗಳನ್ನು ಹಾಗೂ 2021-22ನೇ ಸಾಲಿನಲ್ಲಿ ಉಳಿದ ರೂ.380.00 ಲಕ್ಷಗಳನ್ನು ಸಂಬಂಧಪಟ್ಟ ಯೋಜನೆಗಳಿಗೆ ನಿಯಮಾನುಸಾರ ಪ್ರಗತಿ ಆಧಾರದಲ್ಲಿ ಬಿಡುಗಡೆ ಮಾಡಲು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಬೆಂಗಳೂರು ಇವರಿಗೆ ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ಕ್ರಮ ಕೈಗೊಳ್ಳುವಂತೆ ಆದೇಶಿಸಿದೆ.

1. ಅನುದಾನವನ್ನು ಉದ್ದೇಶಿತ ಯೋಜನೆಗೆ ಮಾತ್ರ ಉಪಯೋಗಿಸತಕ್ಕದ್ದು. ಈ ಹಣವನ್ನು ಬೇರೆ ಯಾವುದೇ ಯೋಜನೆಗೆ ಸರ್ಕಾರದ ಪೂರ್ವಾನುಮತಿ ಇಲ್ಲದೆ ಉಪಯೋಗಿಸತಕ್ಕದ್ದಲ್ಲ.
2. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನಕ್ಕೆ ಲೆಕ್ಕ ಪರಿಶೋಧಕರಿಂದ ಪರೀಕ್ಷಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಸರ್ಕಾರಕ್ಕೆ ತಪ್ಪದೇ ಸಲ್ಲಿಸತಕ್ಕದ್ದು.
3. ಅನುದಾನ ಸದುಪಯೋಗಪಡಿಸಿಕೊಂಡು ಸಲ್ಲಿಸುವ ಉಪಯೋಗಿತಾ ಪ್ರಮಾಣ ಪತ್ರಗಳನ್ನು ಪ್ರಧಾನ ಮಹಾಲೇಖಪಾಲರು, ಕರ್ನಾಟಕ ಇವರ ಪರಿಶೀಲನೆಗೆ ಸಲ್ಲಿಸತಕ್ಕದ್ದು.

ಮುಂದುವರೆದು, ಆಯ್ಕೆಯಾಗಿರುವ ಫಲಾನುಭವಿ ಸಂಸ್ಥೆಗಳು/ಫಲಾನುಭವಿಗಳ ಪಟ್ಟಿಯನ್ನು ಮಾಹಿತಿಗಾಗಿ VGST-KSTePS ವೆಬ್‌ಸೈಟ್(Website) ನಲ್ಲಿ ಪ್ರಕಟಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

Suma. B. S.
3/10/2020

**(ಸುಮ ಬಿ ಎಸ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ,
ಜೈವಿಕ ತಂತ್ರಜ್ಞಾನ ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ,
(ವಿಜ್ಞಾನ ಮತ್ತು ತಂತ್ರಜ್ಞಾನ).

ಗೆ:

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ, (ಲೆಕ್ಕಪತ್ರ 1&2)/(G&SSA/E&RSA) ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾಯದರ್ಶಿಗಳು, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 2-10) ವಿಧಾನಸೌಧ, ಬೆಂಗಳೂರು.
5. ಸಮಾಲೋಚಕರು, ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ, ಬೆಂಗಳೂರು.
6. ಆಯ್ಕೆಯಾಗಿರುವ ಫಲಾನುಭವಿಗಳಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ಮೂಲಕ ಕಳುಹಿಸಿಕೊಡಲು.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

(2)

ಅನುಬಂಧ - 1

VISION GROUP ON SCIENCE AND TECHNOLOGY

Department of Electronics, IT, BT and S & T, Government of Karnataka

List of proposals recommended by VGST for Government grants during the year 2019-20

Scheme: Establishment of Centres of Excellence in Science, Engineering and Medicine (CESEM)

| Sl. No. | Name of the Programme Co-ordinator with details | Title of the project | Subject | Funds to be released during the year 2019-20 I Phase (Rs. in lakhs) | Funds to be released during the year 2020-21 II Phase (Rs. in lakhs) | Total Amount (Rs. in lakhs) | Cheque to be written in favour of | RTGS Details | | | | |
|---|---|---|---|---|---|---|---|---|---|---|---|---|
| | | | | | | | | Account Name | Account No. | IFS Code | Name of the Bank | Branch Name |
| 1 | Dr Shidaling Matteppanavar, Assistant Professor Department of Physics, KLE'S, B. K. Arts, Science and Commerce College Chikodi - 591 201. | Simultaneous Effects of THERMOELECTRICS "Waste Heat to Electrical Energy Conversion" and MULTIFERROICS for "Memory Storage Application" Germanium Telluride (GeTe) and Tin Telluride (SnTe) by Cr, Mn doping and its Derivatives | Physics | 25.00 | 25.00 | 50.00 | Principal B.K. College, Chikodi | Principal | 0 5582200000038 | SYNB0000558 | Syndicate Bank | Chikodi and B K College |
| 2 | Dr. Ananth Prabhu G, Professor, Department of Computer Science and Engineering, Sahyadri College of Engineering & Management, Sahyadri Campus, Adyar, Mangaluru - 575 007. | Centre of Excellence in Digital Forensics Intelligence | Computer Science and Engineering (CSE) | 25.00 | 25.00 | 50.00 | Principal, Sahyadri college of Engineering and Management | Principal, Sahyadri college of Engineering and Management | 3448101000016 | CNRB0003448 | Canara Bank | Adyar Branch Sahyadri Campus - 575 007 |
| GRAND TOTAL | | | | 50.00 | 50.00 | 100.00 | | | | | | |

Prof. M.R.S. Rao
Chairman
VGST - Sub Committee
JNCASR, Jakkur Campus, Bangalore-560 064

Prof. Roddam Narasimha, F.R.S.,
Chairman
VGST - Subcommittee
JNCASR, Jakkur Campus, Bangalore-560 064